ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು – 1

ದಿನಾಂಕ: 14–2–2008

ಸಂ.ಆಶಾ.ಸನಿ(ಆ)ಶಾ.ಭೂ.ಸಂ. /2007–08

**ಸುತ್ತೋಲೆ**

ವಿಷಯ: ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುವ ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳಿಗೆ ಸೇರಿದ ಭೂಮಿ ಅವುಗಳನ್ನು ಸಂರಕ್ಷಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂ. ಇಡಿ 56 ವಿವಿಧ 2006 ದಿ: 3–5–2007

2. ಸರ್ಕಾರದ ಅಧಿಸೂಚನೆ ಸಂ. ಅರ್‌ಡಿ 3 ಪಿಪಿಇ 2007 ದಿ: 27–11–2007.

To Sharath

==

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸರ್ಕಾರದ ನಡವಳಿಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಸ್ಥಿರಾಸ್ತಿಗಳ ದಾಖಲೆಗಳನ್ನು ರಕ್ಷಿಸಲು ಜಿಲ್ಲಾ ಮಟ್ಟದಲ್ಲಿ ಒಬ್ಬ ಅಧಿಕಾರಿಯನ್ನು ಹಾಗೂ ಕ್ಷೇತ್ರ ಮಟ್ಟದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ಎಸ್ಟೇಟ್ ಆಫೀಸರ್ ನೇಮಕ ಮಾಡಲಾಗಿರುತ್ತದೆ.

ಉಲ್ಲೇಖ (2)ರ ಆದೇಶದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಸ್ತಿಗಳು ಒತ್ತುವರಿಯಾಗಿದ್ದಲ್ಲಿ ತೆರವುಗೊಳಿಸಲು ಹಾಗೂ ಗುತ್ತಿಗೆ ಹಣ ಸರ್ಕಾರಕ್ಕೆ ಯಾವುದೇ ಬಾಕಿಯಿದ್ದಲ್ಲಿ ವಸೂಲು ಮಾಡಲು ಸಂಬಂಧಿಸಿದ ಶೈಕ್ಷಣಿಕ ಜಿಲ್ಲೆ ಉಪ ನಿರ್ದೇಶಕರನ್ನು The Karnataka Public Premises (Eviction of Unauthorised occupants) Act, 1974 ನಿಯಮ 3 ರ ಪ್ರಕಾರ Competent Officer ಆಗಿ ಉಲ್ಲೇಖ 2 ರ ಆದೇಶದಲ್ಲಿ ನೇಮಕ ಮಾಡಲಾಗಿರುತ್ತದೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು ಎಸ್ಟೇಟ್ ಆಫೀಸರ್ ಆಗಿ ಈ ಕೆಳಕಂಡ ಕಾರ್ಯಗಳನ್ನು ಮಾಡಲು ಸೂಚಿಸಲಾಗಿದೆ.

- ಪ್ರತಿ ಗ್ರಾಮಗಳಲ್ಲಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿರುವ ಶಾಲೆಗಳ ನಿವೇಶನ/ಭೂಮಿಗಳ ವಿವರಗಳನ್ನು (ನಮೂನೆ–1)ನಿಗದಿತ ವಹಿಯಲ್ಲಿ (ರಿಜಿಸ್ಟರ್) ದಾಖಲಿಸುವುದು
- ಪಂಚಾಯ್ತಿಯ ಕಂದಾಯ ದಾಖಲೆಗಳಲ್ಲಿ ಪರಿಶೀಲಿಸಿ, ಇಲ್ಲಿಯವರೆಗೂ ಕಂದಾಯ ದಾಖಲೆಗಳಲ್ಲಿ, ದಾಖಲೆಗಳು ಆಗದೇ ಇರುವ ಶಾಲೆಗಳ ವಿವರಗಳನ್ನು(ನಮೂನೆ–2) ವಹಿಯಲ್ಲಿ ದಾಖಲಿಸಿ, ಮಾಹಿತಿ ನೀಡುವುದು.
- ಭೂದಾನ ಭೂಮಿಗಳ ಮಾಹಿತಿಯನ್ನು ವಹಿಯಲ್ಲಿ (ನಮೂನೆ –3) ದಾಖಲಿಸಿ, ಮಾಹಿತಿ ನೀಡುವುದು.
- ಶಾಲೆಗಳ ಭೂಮಿ ಅತಿಕ್ರಮಣವಾಗಿರುವ ನಿವೇಶನ/ಭೂಮಿ ವಿವರಗಳನ್ನು (ನಮೂನೆ–4) ವಹಿಯಲ್ಲಿ ದಾಖಲಿಸಿ ಮಾಹಿತಿ ನೀಡುವುದು.

ಹಿರಿಯ ಸಹಾಯಕ ನಿರ್ದೇಶಕರು
([redacted] ಪ್ರಾಥಮಿಕ)
ಆಯುಕ್ತರ ಕಛೇರಿ, ಸಾ.ಶಿ. ಇಲಾಖೆ
ಬೆಂಗಳೂರು

- ಭೂದಾನ ಜಮೀನುಗಳನ್ನು ಪ್ರತಿ ವರ್ಷ ಎಸ್.ಡಿ.ಎಂ.ಸಿ. ಮುಖಾಂತರ ಹರಾಜು ಹಾಕಿಸುವುದು. ಹರಾಜಿನಿಂದ ಬಂದಂತಹ ಹಣವನ್ನು ಎಸ್.ಡಿ.ಎಂ.ಸಿ. ಖಾತೆಗೆ ಜಮಾ ಮಾಡುವುದು. ಹರಾಜು ಮಾಡಿದ ಜಮೀನಿನ ವಿವರ ವಹಿಯಲ್ಲಿ ಪ್ರತಿ ವರ್ಷ (ನಮೂನೆ – 5) ದಾಖಲಿಸುವುದು. ಹರಾಜು ಮುಗಿದ ನಂತರವೂ ಬಿಡ್‌ದಾರರು ಅತಿಕ್ರಮಣ ಮುಂದುವರೆದಲ್ಲಿ ಅಂತಹವರನ್ನು ಖುಲ್ಲಾಪಡಿಸಲು, ಜಿಲ್ಲಾ ಉಪ ನಿರ್ದೇಶಕರಿಗೆ ಪ್ರಸ್ತಾವನೆ ಸಲ್ಲಿಸುವುದು.
- ಸರ್ಕಾರಿ ಹರಾಜು, ಗೋಮಾಳದಲ್ಲಿ ಶಾಲೆಗಳಿದ್ದು, ಸದರಿ ಶಾಲೆಗಳಿರುವ ಜಮೀನು ಇನ್ನು ಶಾಲೆಗೆ, ಮೀಸಲಿಡದೆ ಇದ್ದಲ್ಲಿ, ಅಂತಹ ಜಮೀನುಗಳ ಸಾರ್ವಜನಿಕ ಶಿಕ್ಷಣ ಇಲಾಖೆಗೆ ಭೂಕಂದಾಯ ಕಲಂ 71 ರ ಪ್ರಕಾರ, ರಿಸರ್ವ್ ಮಾಡಲು ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸುವುದು.
- ಪ್ರತಿ ಶಾಲೆಯ ಯಾವುದೇ ತರಹ ಭೂಮಿ ಒತ್ತುವರಿಯಾಗಿದ್ದಲ್ಲಿ ಅಂತಹ ಒತ್ತುವರಿ ಜಮೀನನ್ನು ಖುಲ್ಲಾಪಡಿಸಲು, The Karnataka Public Premises (Eviction of Unauthorised occupants) Act, 1974 ಪ್ರಕಾರ ಉಪ ನಿರ್ದೇಶಕರಿಗೆ ಪ್ರಸ್ತಾವನೆ ಸಲ್ಲಿಸುವುದು.
- ಜಿಲ್ಲಾ ಉಪ ನಿರ್ದೇಶಕರು, ಪ್ರತಿ ಮಾಹೆ, ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುವ ಸರ್ಕಾರಿ ಭೂಮಿ ಸಂರಕ್ಷಿಸುವ ಬಗ್ಗೆ ಶಿಕ್ಷಣಾಧಿಕಾರಿಗಳ ಸಭೆ ನಡೆಸಿ, ಶಿಕ್ಷಣ ಇಲಾಖೆಯ ಭೂಮಿ ಸಂರಕ್ಷಿಸಲು ಕ್ರಮಕೈಗೊಳ್ಳುವುದು.
- ಶಾಲೆಗಳ ನಿವೇಶನ/ಭೂಮಿ ಮಾಹಿತಿಯನ್ನು ನಮೂನೆ–1,2,3,4 ಹಾಗೂ 5 ರಲ್ಲಿ ಸಿ.ಡಿ. ಮುಖಾಂತರ ತಾಲ್ಲೂಕುವಾರು ಕ್ರೋಢೀಕರಿಸಿ, ಉಪ ನಿರ್ದೇಶಕರುಗಳು, ಈ ಕಚೇರಿಗೆ ದಿನಾಂಕ 30–04–2008ರ ಒಳಗೆ ಕಳುಹಿಸುವುದು.

ಜಿಲ್ಲಾ ಉಪ ನಿರ್ದೇಶಕರುಗಳು, ಶಿಕ್ಷಣ ಇಲಾಖೆಯ, ಶಾಲೆ ಜಮೀನು ಒತ್ತುವರಿ, ಖುಲ್ಲಾಪಡಿಸಲು ಸಲ್ಲಿಸಿದ ಪ್ರಸ್ತಾವನೆ ಬಗ್ಗೆ ನಿಗಾ ಇಟ್ಟು, ಸದರಿ ವಹಿಯಲ್ಲಿ ದಾಖಲಿಸಿ, ಒತ್ತುವರಿಯಾದ ಜಮೀನನ್ನು The Karnataka Public Premises (Eviction of Unauthorised occupants) Act, 1974 ಕಾಯ್ದೆ ಪ್ರಕಾರ, ಖುಲ್ಲಾಪಡಿಸುವುದು.

(ಜಿ.ಕುಮಾರ ನಾಯಕ)
ಆಯುಕ್ತರು

ಹಿರಿಯ ಸಹಾಯಕ ನಿರ್ದೇಶಕರು
(ಪ್ರಾಥಮಿಕ ಶಿಕ್ಷಣ)
ಸಾರ್ವಜನಿಕ ಶಿಕ್ಷಣ ಇಲಾಖೆ
ಆಯುಕ್ತರ ಕಛೇರಿ, ಬೆಂಗಳೂರು-560001

ಹಿರಿಯ ಸಹಾಯಕ ನಿರ್ದೇಶಕರು
([redacted] ಪ್ರಾಥಮಿಕ)
ಆಯುಕ್ತರ ಕಛೇರಿ, ಸಾ.ಶಿ. ಇಲಾಖೆ
ಬೆಂಗಳೂರು